ಕರ್ನಾಟಕ ಸರ್ಕಾರ

ಅರಣ್ಯ ಇಲಾಖೆ

ಸಂಖ್ಯೆ: ಎ3/ಎಫ್‌ಸಿ/ಸಿ.ಆರ್– 105/2020–21

ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ,
ಚಿಕ್ಕಬಳ್ಳಾಪುರ ವಿಭಾಗ,
ಚಿಕ್ಕಬಳ್ಳಾಪುರ, ದಿನಾಂಕ: 1 .04.2021

ರವರಿಗೆ,

ಉಪ ಅರಣ್ಯ ಸಂರಕ್ಷಣಾಧಿಕಾರಿಗಳು,
ಕುಂದಾಪುರ ವಿಭಾಗ, ಕುಂದಾಪುರ

ಮಾನ್ಯರೇ,

ವಿಷಯ: Diversion of 1.241 Ha of forest land in Sy No.198, 199 & 214 of Hebri village, Ajekar hobli, Karala Taluk Udupi District for laying of 11KVHT Express line (AB coverd conductor cable) from Hebri MUSS to Varnga passing through Jaravathu Kadu RF and along woth PWD Road in favour of the Executive Engineer (Ele), O & M Division, Mangalore Electricity supply limited (MESCOM), Udupi. **(Proposal No. FP/KA/TRANS/43222/2019)**

ಉಲ್ಲೇಖ:
1 ತಮ್ಮ ಕಛೇರಿ ಪತ್ರ ಸಂಖ್ಯೆ:ಕ್ರ.ಸಂ.ಡಿಎಂಎನ್/ವಿವ.57/ಎಫ್‌ಎಲ್‌ಡಿ/2020–21, ದಿ: 02.03.2021
2 ಈ ಕಛೇರಿ ಪತ್ರ ಸಂಖ್ಯೆ: ಎ3/ಎಫ್‌ಸಿ/ಸಿ.ಆರ್–105 /2020–21, ದಿ: 03.03.2021
3 ವಲಯ ಅರಣ್ಯಾಧಿಕಾರಿ ಚಿಕ್ಕಬಳ್ಳಾಪುರ ರವರ ಕಛೇರಿ ಪತ್ರ ಸಂಖ್ಯೆ: ವಅಅ/ಚಿಪುರ/ಪ.ನೆ.ವ/ಸಿ.ಆರ್– /2020–21, ದಿ: 25.03.2021.
4 ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, (ಅರಣ್ಯ ಪಡೆ ಮುಖ್ಯಸ್ಥರು) ಬೆಂಗಳೂರು ರವರ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ: ಎ5(3)/ಜಿಎಫ್‌ಎಲ್/ ಸಿ.ಆರ್–28/2009–10 ಇ–88289, ದಿ: 30.04.2020.

* * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕಾರ್ಯನಿರ್ವಾಹಕ ಇಂಜಿನಿಯರ್, (ವಿ) (ಓ & ಎಂ) ವಿಭಾಗ, ಬೆಸ್ಕಾಂ, ಉಡುಪಿ ಇವರು ಹೆಬ್ರಿ ಮುಸ್ಸಯಿಂದ ವರಂಗವರೆಗೆ 11 ಕೆವಿಎಚ್‌ಟಿ ಎಕ್ಸ್‌ಪ್ರೆಸ್ ವಿದ್ಯುತ್ ಮಾರ್ಗ (AB coverd conductor cable) ರಚನೆ ಬಗ್ಗೆ ಜರುವತ್ತು ಕಾಡು ಮೀಸಲು ಅರಣ್ಯದ ಕಾರ್ಕಳ ತಾಲ್ಲೂಕು ಅಜೆಕಾರು ಹೋಬಳಿಯ ಹೆಬ್ರಿ ಗ್ರಾಮದ ಸರ್ವೆ ನಂ. 198, 199 ಮತ್ತು 214 ರಲ್ಲಿ 1.2411 ಹೆ. ಅರಣ್ಯ ಪ್ರದೇಶವನ್ನು ಅರಣ್ಯ (ಸಂರಕ್ಷಣಾ) ಕಾಯ್ದೆಯಡಿ ಬಿಡುಗಡೆಗೊಳಿಸುವ ಬಗ್ಗೆ ಕೇಂದ್ರ ಸರ್ಕಾರದ ವೆಬ್ ಪೋರ್ಟಲ್‌ಗೆ ಸಲ್ಲಿಸಿದ Proposal No. FP/KA/TRANS/43222/2019 ರ ಕುರಿತಂತೆ 1.2411 ಹೆ. ಅರಣ್ಯ ಭೂಮಿಯನ್ನು ಅರಣ್ಯ ಸಂರಕ್ಷಣೆ ಕಾಯ್ದೆಯಡಿ ಬಿಡುಗಡೆಗೊಳಿಸಲಿರುವ ಅರಣ್ಯ ಭೂಮಿಯ ಬಾಬ್ತು ಪರಿಹಾರಾತ್ಮಕ ನೆಡುತೋಪು ಬೆಳೆಸಲು ಸುಮಾರು 2.5 ಹೆ. ಕ್ಷೀಣಿತ ಅರಣ್ಯ ಪ್ರದೇಶವು ನಿಮ್ಮ ವಿಭಾಗ ವ್ಯಾಪ್ತಿಯಲ್ಲಿ ಲಭ್ಯವಿದ್ದಲ್ಲಿ ಮಾಹಿತಿ ಸಲ್ಲಿಸಬೇಕಾಗಿ ಉಲ್ಲೇಖ (1)ರ ಪತ್ರದಲ್ಲಿ ಕೋರಿರುತ್ತೀರಿ.

ಮುಂದುವರೆದು, ಮೇಲ್ಕಂಡ ಯೋಜನೆಗೆ ಪರಿಹಾರಾತ್ಮಕ ನೆಡುತೋಪು ಬೆಳೆಸಲು ಅಗತ್ಯವಿರುವ 2.5 ಹೆ ಕ್ಷೀಣಿತ ಅರಣ್ಯ ಪ್ರದೇಶವು ಚಿಕ್ಕಬಳ್ಳಾಪುರ ವಲಯ ವ್ಯಾಪ್ತಿಯಲ್ಲಿ ಲಭ್ಯವಿದ್ದಲ್ಲಿ ಅಂತಹ ಪ್ರದೇಶದ ಮಾಹಿತಿಯನ್ನು ಫಾರಂ – ಸಿ ಯಲ್ಲಿ CA Land suitability Ceritificate ಹಾಗೂ CA Scheme, Topo Map, Geo-referance Map, KML Map ಗಳನ್ನು ತಯಾರಿಸಿ ಸಲ್ಲಿಸಲು ವಲಯ ಅರಣ್ಯಾಧಿಕಾರಿ ಚಿಕ್ಕಬಳ್ಳಾಪುರ ಇವರಿಗೆ ಉಲ್ಲೇಖ (2)ರ ಈ ಕಛೇರಿ ಪತ್ರದಲ್ಲಿ ತಿಳಿಸಲಾಗಿತ್ತು.

ಅದರನ್ವಯ, ಚಿಕ್ಕಬಳ್ಳಾಪುರ ವಲಯದಲ್ಲಿ ಅರಣ್ಯ ಸಂರಕ್ಷಣಾ ಕಾಯ್ದೆ 1980ರಡಿ ಕೇಂದ್ರ ಸರ್ಕಾರದ ವೆಬ್ ಪೋರ್ಟಲ್‌ಗೆ Proposal No. FP/KA/TRANS/43222/2019 ರಂತೆ ಪರಿಹಾರಾತ್ಮಕ ನೆಡುತೋಪು ಬೆಳೆಸಲು ಎನ್‌ಡಿಬಿ–4ನೇ ಬ್ಲಾಕ್‌ನಲ್ಲಿರುವ ತೇಕಲಹಳ್ಳಿ ಸರ್ವೆ ನಂ. 22ರಲ್ಲಿ ಒಟ್ಟು 2.5 ಹೆ. ಕ್ಷೀಣಿತ ಅರಣ್ಯ ಪ್ರದೇಶ ಲಭ್ಯವಿರುವುದಾಗಿ ವಲಯ ಅರಣ್ಯಾಧಿಕಾರಿ ಚಿಕ್ಕಬಳ್ಳಾಪುರ ಇವರು ಈ ಕಛೇರಿಗೆ ವರದಿ ಮಾಡುತ್ತಾ ಇದಕ್ಕೆ ಸಂಬಂಧಪಟ್ಟ ಟೋಪೋ ನಕ್ಷೆ, ಫಾರಂ–ಸಿ ಮತ್ತು ನಕಾಶೆಯನ್ನು ತಯಾರಿಸಿ, ಈ ಕಛೇರಿಗೆ ಉಲ್ಲೇಖ (3)ರಲ್ಲಿ ಈ ಕಛೇರಿಗೆ ಸಲ್ಲಿಸಿರುತ್ತಾರೆ.

ಮುಂದುವರೆದು, ಅರಣ್ಯ ಸಂರಕ್ಷಣಾ ಕಾಯ್ದೆ 1980ರಡಿಯಲ್ಲಿ ಅರಣ್ಯ ಭೂಮಿಯನ್ನು ಅರಣ್ಯೇತರ ಉದ್ದೇಶಗಳಿಗೆ ಬಿಡುಗಡೆ ಮಾಡುವ ಪ್ರಕರಣಗಳಲ್ಲಿ ಪರಿಹಾರಾತ್ಮಕ ನೆಡುತೋಪು (CA) ಬೆಳೆಸುವ ಸಲುವಾಗಿ ಇಲಾಖಾ ಧರಗಳನ್ವಯ ಮೊತ್ತವನ್ನು ಉಪಯೋಗಿ ಸಂಸ್ಥೆಗಳಿಂದ ಪಾವತಿಸಿಕೊಳ್ಳಲು ಉಲ್ಲೇಖ (4)ರ ಅಧಿಕೃತ ಜ್ಞಾಪನಾ ಪತ್ರದಲ್ಲಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, (ಅರಣ್ಯ ಪಡೆ ಮುಖ್ಯಸ್ಥರು) ಬೆಂಗಳೂರು ರವರು ಆದೇಶಿಸಿರುತ್ತಾರೆ. ಅದರನ್ವಯ, ಇಲಾಖಾ ಧರಗಳನ್ವಯ, ಪರಿಹಾರಾತ್ಮಕ ನೆಡುತೋಪು (CA), ದಂಡನಾತ್ಮಕ ನೆಡುತೋಪು (Penal CA) ಹಾಗೂ ಸುರಕ್ಷಾ ವಲಯ ನೆಡುತೋಪು (One-and-a-half times of the safety zone area in degraded forests) ಗಳಿಗೆ ಚೈನ್‌ಲಿಂಕ್ (Chain Link) ಬೇಲಿ ನಿರ್ಮಿಸಲು ಈ ಕೆಳಕಂಡಂತೆ ಹಣವನ್ನು ಉಪಯೋಗಿ ಸಂಸ್ಥೆಯಿಂದ ಪಾವತಿಸಿಕೊಳ್ಳಲು ತಿಳಿಸಲಾಗಿದೆ.

| ಕ್ರ.ಸಂ | ವಲಯ | ಲಭ್ಯವಿರುವ ಕ್ಷೀಣಿತ ಅರಣ್ಯ ಪ್ರದೇಶದ ವಿವರ | ಸರ್ವೆ | ವಿಸ್ತೀರ್ಣ ಹೆ.ಗಳಲ್ಲಿ | ಪರಿಹಾರಾತ್ಮಕ ನೆಡುತೋಪು ಬೆಳೆಸುವ ಧರ ಪ್ರತಿ ಹೆಗೆ | ಉಪಯೋಗಿ ಸಂಸ್ಥೆಯಿಂದ ಪಾವತಿಸಿಕೊಳ್ಳಬೇಕಾದ CA ಹಣ ಒಟ್ಟು 35 ಹೆಗೆ |
|---|---|---|---|---|---|---|
| 1 | ಚಿಕ್ಕಬಳ್ಳಾಪುರ | ಚಿಕ್ಕಬಳ್ಳಾಪುರ ತಾ॥, ಮಂಡಿಕಲ್ ಹೋ॥ ಎನ್‌ಡಿಬಿ 4ನೇ ಬ್ಲಾಕ್, ಕೇಕಲಹಳ್ಳಿ | 22 | 2.5 ಹೆ. | ರೂ. 15,93,000.00 | ರೂ. 39,82,500.00 |

ಮೇಲ್ಕಂಡ ಕ್ಷೀಣಿತ ಅರಣ್ಯ ಪ್ರದೇಶಕ್ಕೆ ಸಂಬಂಧಪಟ್ಟ ದಾಖಲಾತಿಗಳನ್ನು ಈ ಪತ್ರದೊಂದಿಗೆ ಅಡಕಗೊಳಿಸಿ ತಮ್ಮ ಅವಗಾಹನೆಗಾಗಿ ಸಲ್ಲಿಸಲಾಗಿದೆ.

ತಮ್ಮ ನಂಬುಗೆಯ,

ಉಪ ಅರಣ್ಯ ಸಂರಕ್ಷಣಾಧಿಕಾರಿ,
ಚಿಕ್ಕಬಳ್ಳಾಪುರ ವಿಭಾಗ, ಚಿಕ್ಕಬಳ್ಳಾಪುರ